# ಬೇಸಿಗೆ ಮತ್ತು ಪ್ರಯಾಣ

الصيف والسفر

< الكنادي >

ಅಲ್‌ಅಲ್ಲಾಮತೈನ್ ಇಬ್ನ್ ಬಾಝ್ ವಲ್‌ಅಲ್ಬಾನೀ

http://www.3llamteen.com

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಅಬೂಬಕರ್ ನಝೀರ್ ಸಲಫಿ

# الصيف والسفر

موقع سلسلة العلامتين ابن باز والألباني

http://www.3llamteen.com

ترجمة: محمد حمزة البتوري

مراجعة: أبو بكر نذير السلفي

# ಬೇಸಿಗೆ ಮತ್ತು ಪ್ರಯಾಣ

ಅವಿಶ್ವಾಸಿಗಳ ನಾಡಿಗೆ ಹೋಗಿ ಅಲ್ಲಿನ ಕಡಲ ಕಿನಾರೆಗಳಲ್ಲಿ ಬೇಸಿಗೆ ರಜೆಯನ್ನು ಕಳೆಯುವ ಪರಿಪಾಠವನ್ನು ಹಲವರೂ ಒಂದು ಹವ್ಯಾಸವನ್ನಾಗಿ ಮಾಡಿಕೊಂಡಿದ್ದಾರೆ. ಇವರು ತಮ್ಮೊಂದಿಗೆ ತಮ್ಮ ಪತ್ನಿಯರನ್ನೂ ಹದಿಹರೆಯದ ಮಕ್ಕಳನ್ನೂ ಕರೆದೊಯ್ಯುತ್ತಾರೆ. ಅಥವಾ ಅವರು ಮಾತ್ರ ಒಂಟಿಯಾಗಿ ತೆರಳುತ್ತಾರೆ. ಅವರಲ್ಲಿ ಕೆಲವರು ತಮ್ಮ ಹದಿಹರೆಯದ ಮಕ್ಕಳನ್ನು ವಿಶೇಷವಾಗಿ ಹೆಣ್ಣು ಮಕ್ಕಳನ್ನು ಪ್ರವಾಸ, ಅಥವಾ ಮನರಂಜನೆಯ ಹೆಸರಲ್ಲಿ ಒಂಟಿಯಾಗಿಯೇ ಕಳುಹಿಸಿಕೊಡುತ್ತಾರೆ. ಇದಕ್ಕಾಗಿ ಅಲ್ಲಾಹು ಅನುಗ್ರಹಿಸಿದ ಸಂಪತ್ತಿನಿಂದ ಅವರು ಹೇರಳವಾಗಿ ಖರ್ಚು ಮಾಡುತ್ತಾರೆ.

ತಮ್ಮ ಜೀವನದ ಗುರಿಯನ್ನೇ ಅರಿತಿರದ ಶ್ರೀಮಂತರಲ್ಲಿ ಹೆಚ್ಚಿನವರೂ ದುಂದುಗಾರಿಕೆ ಹಾಗೂ ಆಡಂಬರದ ಮೂಲಕ ಕೆಟ್ಟ ಮಾದರಿಯನ್ನು ತೋರಿಸಿಕೊಡುತ್ತಿದ್ದಾರೆ. ಅವರಿಗೆ ಸಮಾಜದ ಬಗ್ಗೆ ಚಿಂತೆಯಿಲ್ಲ. ತಮ್ಮ ಸಹೋದರರ ಕಷ್ಟ-ಸುಖಗಳಲ್ಲಿ ಅವರು ಭಾಗಿಯಾಗುವುದಿಲ್ಲ. ಬದಲಾಗಿ ಅವರು ಅವಕಾಶ ಸಿಕ್ಕಾಗಲೆಲ್ಲ ಪ್ರವಾಸವೆಂಬ ಹೆಸರಲ್ಲಿ ಅವಿಶ್ವಾಸಿಗಳ ನಾಡಿಗೆ ಹಾರಿ ಹೋಗುತ್ತಾರೆ.

ವಿಚಿತ್ರವೇನೆಂದರೆ, ಪ್ರವಾಸ ಹೊರಡುವ ಮುಸಲ್ಮಾನನು ತನ್ನ ಪ್ರವಾಸದಲ್ಲಿ ಇತರ ಧರ್ಮೀಯರಂತೆಯೇ ಆಗಿರುತ್ತಾನೆ. ಯಾಕೆಂದರೆ ಅವನು ಸ್ಟಾರ್ ಹೋಟೆಲ್‌ಗಳಲ್ಲಿ ತಂಗುತ್ತಾನೆ, ದುಬಾರಿ ಆಹಾರಗಳನ್ನು ಸೇವಿಸುತ್ತಾನೆ ಮತ್ತು ಹಣವನ್ನು ಎಡಭಾಗದಿಂದಲೂ ಬಲಭಾಗದಿಂದಲೂ ಯಥೇಷ್ಟವಾಗಿ ಖರ್ಚು ಮಾಡುತ್ತಾನೆ.

ಮಾನ್ಯ ಸಹೋದರ ಸಹೋದರಿಯರೇ,

ಆ ನಾಡುಗಳಲ್ಲಿ ಅಥವಾ ಅಂತಹ ಪ್ರವಾಸ ತಾಣಗಳಲ್ಲಿ ನಗ್ನತೆಯು ಪ್ರದರ್ಶಿಸಲ್ಪಡುತ್ತದೆಯೆಂಬುದರ ಬಗ್ಗೆ ತಮಗೆ ಅರಿವಿದೆಯೇ? ಮದ್ಯವನ್ನು ನೀರಿನಂತೆ ಕುಡಿಯಲಾಗುತ್ತಿದೆಯೆಂಬುದರ ಬಗ್ಗೆ ತಮಗೆ ಅರಿವಿದೆಯೇ? ವ್ಯಭಿಚಾರವು ಬೆಂಕಿಯಂತೆ ವ್ಯಾಪಿಸಿಕೊಂಡಿದೆ ಯೆಂಬುದರ ಬಗ್ಗೆ ತಮಗೆ ಅರಿವಿದೆಯೇ? ಮಾತ್ರವಲ್ಲ, ಅಲ್ಲಿ ಹೃದಯವನ್ನು ಕಲ್ಲಾಗಿಸುವ ಐಹಿಕ ಆಡಂಬರಗಳು ತುಂಬಿ ತುಳುಕುತ್ತಿರುತ್ತವೆ. ಅಂತಹ ಸ್ಥಳಗಳಿಗೆ ನಿರಂತರ ಭೇಟಿ ನೀಡುವುದರಿಂದ ಅವು ನಮಗೆ ಏನೂ ಅಲ್ಲವೆಂಬಂತೆ ಕಾಣತೊಡಗುತ್ತವೆ. ಕೆಲವೊಮ್ಮೆ ನಮ್ಮಲ್ಲಿ ಕೆಲವರು ಅವರೊಂದಿಗೆ ಸೇರಿಕೊಳ್ಳುವುದೂ ಇದೆ. ಹದಿಹರೆಯದ ಮಕ್ಕಳನ್ನು ಅಲ್ಲಿಗೆ ಒಯ್ಯುವುದರಿಂದ ಅವರಲ್ಲುಂಟಾಗುವ ಭಾವನೆಗಳ ಮತ್ತು ತಳಮಳಗಳ ಬಗ್ಗೆ ಯೋಚಿಸಿ ನೋಡಿರಿ. ಇಂತಹ ಸ್ಥಳಗಳಿಗೆ ನಿರಂತರವಾಗಿ ಒಯ್ಯುವುದರಿಂದ ಮಕ್ಕಳು ಅಂತಹ ಅಧಾರ್ಮಿಕತೆಗಳಿಗೆ ಹೊಂದಿಕೊಳ್ಳತೊಡಗುತ್ತಾರೆ. ಅವರ ಮನಸ್ಸುಗಳು ಅವುಗಳನ್ನು ಸ್ವೀಕರಿಸತೊಡಗುತ್ತವೆ. ಕೊನೆಗೆ ನಾವು ಇಷ್ಟಪಡದಂತಹ ಒಂದು ಸ್ಥಿತಿಗೆ ಅವರು ತಲುಪಿಬಿಡುತ್ತಾರೆ.

ಮಾನ್ಯ ಸಹೋದರ ಸಹೋದರಿಯರೇ, ವಿದ್ವಾಂಸರು ಪ್ರಯಾಣವನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ.

- **ಆಕ್ಷೇಪಾರ್ಹ ಪ್ರಯಾಣ**
- **ಪ್ರಶಂಸಾರ್ಹ ಪ್ರಯಾಣ**
- **ಸಮ್ಮತಾರ್ಹ ಪ್ರಯಾಣ.**

## ಆಕ್ಷೇಪಾರ್ಹ ಪ್ರಯಾಣ

ಇದು ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವುದಕ್ಕಾಗಿರುವ ಪ್ರಯಾಣ. ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘನೆ ಮಾಡಲಾಗುತ್ತಿರುವ ಸ್ಥಳಗಳಿಗೆ ಪ್ರಯಾಣ ಮಾಡುವುದು ಈ ವಿಧದಲ್ಲಿ ಸೇರುತ್ತದೆ. ಈ ಪ್ರಯಾಣವು ನಿಷಿದ್ಧವಾಗಿದೆ. ಇದರ ಅಂತಿಮ ಫಲಿತಾಂಶವು ಇಹಲೋಕದಲ್ಲೂ ಪರಲೋಕದಲ್ಲೂ ಹಾನಿಕರವಾಗಿರುವುದು. ಆ ಫಲಿತಾಂಶವನ್ನು ಅಲ್ಲಾಹನ ಹೊರತು ಯಾರೂ ಅರಿತಿರಲಾರರು.

## ಪ್ರಶಂಸಾರ್ಹ ಪ್ರಯಾಣ

ಹಜ್ಜ್ ಅಥವಾ ಉಮ್ರಕ್ಕಾಗಿ ಹೊರಡುವ ಪ್ರಯಾಣ, ಮೂರು ಮಸೀದಿಗಳನ್ನು ಅಂದರೆ ಮಸ್ಜಿದುಲ್ ಹರಾಮ್, ಮಸ್ಜಿದುನ್ನಬವೀ ಮತ್ತು ಮಸ್ಜಿದುಲ್ ಅಕ್ಸಾಗಳನ್ನು ಸಂದರ್ಶಿಸಲು ಮಾಡುವ ಪ್ರಯಾಣ, ಇಲ್ಮ್ ಕಲಿಯುವುದಕ್ಕಾಗಿ ಮಾಡುವ ಪ್ರಯಾಣ, ವಿದ್ವಾಂಸರನ್ನು ಸಂದರ್ಶಿಸುವುದಕ್ಕಾಗಿ ಮಾಡುವ ಪ್ರಯಾಣ ಮೊದಲಾದವುಗಳು ಈ ವಿಧದಲ್ಲಿ ಸೇರುತ್ತವೆ.

## ಸಮ್ಮತಾರ್ಹ ಪ್ರಯಾಣ

ಜೀವನ ಮಾರ್ಗವನ್ನು ಅರಸುತ್ತಾ ಮಾಡುವ ಪ್ರಯಾಣ, ವಿಶ್ರಾಂತಿಗಾಗಿ ಅಥವಾ ಮಾನಸಿಕ ನೆಮ್ಮದಿಗಾಗಿ ಮಾಡುವ ಪ್ರಯಾಣ ಇತ್ಯಾದಿಗಳು ಈ ವಿಧದಲ್ಲಿ ಸೇರುತ್ತವೆ.

ಕೇವಲ ಪ್ರವಾಸಕ್ಕಾಗಿ ಅಥವಾ ಮನರಂಜನೆಗಾಗಿ ಪ್ರಯಾಣ ಮಾಡುವುದರಲ್ಲಿ ಆಯುಷ್ಯವನ್ನು ಕರಗಿಸುವುದು, ಹಣವನ್ನು ಪೋಲು ಮಾಡುವುದು, ಹೃದಯವನ್ನು ಕಲ್ಲಾಗಿಸುವುದು ಮತ್ತು ಅನಾವಶ್ಯಕವಾಗಿ ದೇಹವನ್ನು ದಂಡಿಸುವುದರ ಹೊರತು ಬೇರಾವ ಪ್ರಯೋಜನವೂ ಇಲ್ಲ.

ಮಾನ್ಯ ಸಹೋದರ ಸಹೋದರಿಯರೇ,

ಪ್ರಯಾಣಕ್ಕೆ ಹಲವಾರು ಶಿಷ್ಟಾಚಾರಗಳಿವೆ ಮತ್ತು ಪ್ರಯಾಣ ಮಾಡುವುದರಲ್ಲಿ ಹಲವಾರು ನಿಷಿದ್ಧಗಳಿವೆ. ಇವುಗಳ ಬಗ್ಗೆ ಎಚ್ಚರವಹಿಸಬೇಕಾಗಿದೆಯೆಂದು ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ.

## ಪ್ರಯಾಣದ ಶಿಷ್ಟಾಚಾರಗಳು

1. ಪ್ರಯಾಣ ಮಾಡುವುದಕ್ಕೆ ಮುಂಚೆ ಆಜ್ಞೋಲ್ಲಂಘನೆ ಮತ್ತು ಪಾಪಗಳ ಬಗ್ಗೆ ತೌಬಾ ಮಾಡಬೇಕು, ಯಾವುದಾದರೂ ವಸ್ತುವನ್ನು ಅನ್ಯಾಯವಾಗಿ ಕಸಿದುಕೊಂಡಿದ್ದರೆ ಅದನ್ನು ಮರಳಿಸಬೇಕು, ಸಾಲಗಳಿದ್ದರೆ ಸಂದಾಯ ಮಾಡಬೇಕು ಮತ್ತು ತನ್ನ ಆಶ್ರಯದಲ್ಲಿರುವವರಿಗೆ ಖರ್ಚಿಗೆ ಕೊಡಬೇಕು. ಪ್ರಯಾಣಕ್ಕೆ ಧರ್ಮಸಮ್ಮತವಾದ ಮತ್ತು ಶುದ್ಧವಾದ ಹಣವನ್ನು ಬಳಸಬೇಕು.

2. ಪ್ರಯಾಣದ ಸಂದರ್ಭ ಸೌಮ್ಯವಾಗಿ ಮಾತನಾಡುವುದು, ಆಹಾರ ಉಣಿಸುವುದು ಮತ್ತು ಉತ್ತಮ ಸ್ವಭಾವದಿಂದ ವರ್ತಿಸುವುದಕ್ಕೆ ಪ್ರೇರಣೆ ನೀಡಬೇಕು. ಯಾಕೆಂದರೆ ಪ್ರಯಾಣದಲ್ಲಿ ತೀವ್ರ ಬಳಲಿಕೆ, ಅತೀವ ಪ್ರಯಾಸ ಮತ್ತು ಇಕ್ಕಟ್ಟುಗಳು ಸಾಮಾನ್ಯವಾಗಿವೆ. ಆದ್ದರಿಂದ ತಾಳ್ಮೆ ವಹಿಸುವುದು ಮತ್ತು ಉತ್ತಮವಾಗಿ ವರ್ತಿಸುವುದು ಅನಿವಾರ್ಯವಾಗಿದೆ.

3. ಇಸ್ತಿಖಾರತ್ ಮಾಡಬೇಕು:

ಪ್ರವಾದಿ(ﷺ)ರವರು ಹೇಳಿದರು:

{إِذَا هَمَّ أَحَدُكُمْ بِالْأَمْرِ فَلْيَرْكَعْ رَكْعَتَيْنِ مِنْ غَيْرِ الْفَرِيضَةِ ثُمَّ لِيَقُولُ: اللَّهُمَّ إِنِّي أَسْتَخِيرُكَ بِعِلْمِكَ وَأَسْتَقْدِرُكَ بِقُدْرَتِكَ وَأَسْأَلُكَ مِنْ فَضْلِكَ الْعَظِيمِ فَإِنَّكَ تَقْدِرُ وَلَا أَقْدِرُ وَتَعْلَمُ وَلَا أَعْلَمُ وَأَنْتَ عَلَّامُ الْغُيُوبِ اللَّهُمَّ إِنْ كُنْتَ تَعْلَمُ أَنَّ هَذَا الْأَمْرَ خَيْرٌ لِي فِي دِينِي وَمَعَاشِي وَعَاقِبَةِ أَمْرِي فَاقْدُرْهُ لِي وَإِنْ كُنْتَ تَعْلَمُ أَنَّ هَذَا الْأَمْرَ شَرٌّ لِي فِي دِينِي وَمَعَاشِي وَعَاقِبَةِ أَمْرِي فَاصْرِفْهُ عَنِّي وَاصْرِفْنِي عَنْهُ وَاقْدُرْ لِي الْخَيْرَ حَيْثُ كَانَ ثُمَّ رَضِّنِي بِهِ} رواه البخاري

"ನಿಮ್ಮಲ್ಲಿ ಯಾರಾದರೂ ಒಂದು ಕಾರ್ಯವನ್ನು ಮಾಡಲು ಉದ್ದೇಶಿಸಿದರೆ ಅವನು ಕಡ್ಡಾಯವಲ್ಲದ ಎರಡು ರಕ್‌ಅತ್ ನಮಾಝ್ ಮಾಡಲಿ ಮತ್ತು ಹೀಗೆ ಪ್ರಾರ್ಥಿಸಲಿ:

ಅಲ್ಲಾಹುಮ್ಮ ಇನ್ನೀ ಅಸ್ತಖೀರುಕ ಬಿಇಲ್ಮಿಕ ವಅಸ್ತಕ್ದಿರುಕ ಬಿಕುದ್ರತಿಕ ವಅಸ್‌ಅಲುಕ ಬಿಫದ್ಲಿಕಲ್ ಅಝೀಮ್. ಫಇನ್ನಕ ತಕ್ದಿರು ವಲಾ ಅಕ್ದಿರು, ವತಅ್‌ಲಮು ವಲಾ ಅಅ್‌ಲಮು, ವಅನ್ತ ಅಲ್ಲಾಮುಲ್ ಗುಯೂಬ್. ಅಲ್ಲಾಹುಮ್ಮ ಇನ್ ಕುನ್ತ ತಅ್‌ಲಮು ಅನ್ನ ಹಾದಲ್ ಅಮ್ರ ಖೈರುನ್ ಲೀ ಫೀ ದೀನೀ ವಮಆಶೀ ವಆಕಿಬತಿ ಅಮ್ರೀ, ಫಕ್ದುರ್‌ಹು ಲೀ, ವಇನ್ ಕುನ್ತ ತಅ್‌ಲಮು ಅನ್ನ ಹಾದಲ್ ಅಮ್ರ ಶರ್ರುನ್ ಲೀ ಫೀ ದೀನೀ ವಮಆಶೀ ವ ಆಕಿಬತಿ ಅಮ್ರೀ, ಫಸ್ರಿಫ್‌ಹು ಅನ್ನೀ ವಸ್ರಿಫ್‌ನೀ ಅನ್‌ಹು ವಕ್ದುರ್ ಲೀ ಅಲ್‌ಖೈರ ಹೈಸು ಕಾನ ಸುಮ್ಮ ರದ್ದಿನೀ ಬಿಹೀ." [ಅಲ್‌ಬುಖಾರಿ]

4. ಪ್ರಯಾಣ ಮಾಡುವವನು ಯುವಕನಾಗಿದ್ದರೆ ಅವನು ತನ್ನ ತಂದೆ ತಾಯಿಯ ಅನುಮತಿ ಪಡೆಯಬೇಕು ಮತ್ತು ಮಹಿಳೆಯಾಗಿದ್ದರೆ ಆಕೆ ತನ್ನ ಪತಿಯ ಅನುಮತಿಯನ್ನು ಪಡೆಯಬೇಕು. ಮಹಿಳೆ ಒಂಟಿಯಾಗಿ ಪ್ರಯಾಣ ಮಾಡುವಂತಿಲ್ಲ. ಬದಲಾಗಿ ಆಕೆಯೊಂದಿಗೆ ಆಕೆಯ ಮಹ್ರಮ್ ಇರಬೇಕಾಗಿದೆ. ಪ್ರವಾದಿ(ﷺ)ರವರು ಹೇಳಿದರು:

{لَا تُسَافِرُ الْمَرْأَةُ إِلَّا مَعَ ذِي مَحْرَمٍ}.

“ಮಹಿಳೆಯು ಮಹ್ರಮ್‌ನೊಂದಿಗಲ್ಲದೆ ಪ್ರಯಾಣ ಮಾಡಬಾರದು.”

5. ಸಜ್ಜನರಾದ ಗೆಳೆಯರೊಂದಿಗೆ ಪ್ರಯಾಣ ಮಾಡಬೇಕು. ಯಾಕೆಂದರೆ ಅವರು ಒಳಿತಿನ ವಿಷಯದಲ್ಲಿ ನಿಮಗೆ ಸಹಾಯ ಮಾಡುವರು ಮತ್ತು ನಿಮಗೆ ಮರೆತುಹೋದ ವಿಷಯಗಳನ್ನು ನೆನಪಿಸಿಕೊಡುವರು. ಅಲ್ಲಾಹು ಹೇಳುತ್ತಾನೆ:

﴿وَٱصۡبِرۡ نَفۡسَكَ مَعَ ٱلَّذِينَ يَدۡعُونَ رَبَّهُم بِٱلۡغَدَوٰةِ وَٱلۡعَشِيِّ يُرِيدُونَ وَجۡهَهُۥۖ وَلَا تَعۡدُ عَيۡنَاكَ عَنۡهُمۡ تُرِيدُ زِينَةَ ٱلۡحَيَوٰةِ ٱلدُّنۡيَاۖ﴾ [الكهف: 28] .

“ತಮ್ಮ ರಬ್ಬ್‌ನ ಮುಖವನ್ನು ಆಶಿಸಿ ಬೆಳಗ್ಗೆ ಮತ್ತು ಸಂಜೆ ಅವನೊಂದಿಗೆ ಪ್ರಾರ್ಥಿಸು ತ್ತಿರುವವರ ಜೊತೆಗೆ ತಾವು ತಮ್ಮ ಮನಸ್ಸನ್ನು ತಾಳ್ಮೆಯೊಂದಿಗೆ ನಿಲ್ಲಿಸಿರಿ. ಐಹಿಕ ಜೀವನದ ಅಲಂಕಾರಗಳನ್ನು ಆಶಿಸಿ ತಮ್ಮ ಕಣ್ಣುಗಳು ಅವರನ್ನು ದಾಟಿ ಹೋಗದಿರಲಿ.” [ಕುರ್‌ಆನ್ 18:28]

﴿يَٰٓأَيُّهَا ٱلَّذِينَ ءَامَنُواْ ٱتَّقُواْ ٱللَّهَ وَكُونُواْ مَعَ ٱلصَّٰدِقِينَ ١١٩﴾ [التوبة: 119].

“ಓ ವಿಶ್ವಾಸಿಗಳೇ, ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ಸತ್ಯಸಂಧರೊಂದಿಗೆ ಸೇರಿಕೊಳ್ಳಿರಿ.” [ಕುರ್‌ಆನ್ 9:119]

ಅಬೂ ದಾವೂದ್‌ನಲ್ಲಿರುವ ಅಬೂ ಸಈದ್(ﷺ)ರವರ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹೇಳಿದರು:

{لَا تُصَاحِبْ إِلَّا مُؤْمِنًا وَلَا يَأْكُلْ طَعَامَكَ إِلَّا تَقِيٌّ}. رواه أبو داود وصححه الألباني.

“ವಿಶ್ವಾಸಿಯನ್ನೇ ಹೊರತು ಬೇರಾರನ್ನೂ ಜೊತೆಗಾರನನ್ನಾಗಿ ಮಾಡದಿರು ಮತ್ತು ತಕ್ವಾವುಳ್ಳವನ ಹೊರತು ಬೇರಾರೂ ನಿನ್ನ ಆಹಾರವನ್ನು ಉಣ್ಣದಿರಲಿ.” [ಇದನ್ನು ಅಲ್‌ಅಲ್ಬಾನೀ ಹಸನ್ ಎಂದಿದ್ದಾರೆ].

6. ಏಕಾಂಗಿಯಾಗಿ ಪ್ರಯಾಣ ಮಾಡಬಾರದು. ಮೂರು ಅಥವಾ ಅದಕ್ಕಿಂತ ಹೆಚ್ಚು ಜನರೊಂದಿಗೆ ಪ್ರಯಾಣ ಮಾಡಬೇಕು ಮತ್ತು ನಿಮ್ಮಲ್ಲಿ ಒಬ್ಬರನ್ನು ಅಮೀರ್ (ನೇತಾರ) ಆಗಿ ನೇಮಿಸಿಕೊಳ್ಳಬೇಕು. ಸಹೀಹುಲ್ ಬುಖಾರಿಯಲ್ಲಿರುವ ಇಬ್ನ್ ಉಮರ್(ﷺ)ರವರ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹೇಳಿದರು:

{لَوْ يَعْلَمُ النَّاسُ مَا فِي الْوَحْدَةِ مَا أَعْلَمُ مَا سَارَ رَاكِبٌ بِلَيْلٍ وَحْدَهُ}. رواه البخاري.

“ಒಂಟಿಯಾಗಿ ಪ್ರಯಾಣ ಮಾಡುವುದರಲ್ಲಿ ಏನೆಲ್ಲ ಆಪತ್ತುಗಳಿವೆಯೆಂದು ನಾನು ಅರಿತಿರುವುದನ್ನು ಜನರು ಅರಿತಿರುತ್ತಿದ್ದರೆ ಅವರಲ್ಲಿ ಯಾರೂ ರಾತ್ರಿಯಲ್ಲಿ ಒಂಟಿಯಾಗಿ ಪ್ರಯಾಣ ಮಾಡುತ್ತಿರಲಿಲ್ಲ.”

ಅಬೂ ದಾವೂದ್‌ನಲ್ಲಿರುವ ಅಬೂ ಹುರೈರಾ(ﷺ)ರವರ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹೇಳಿದರು:

{إِذَا خَرَجَ ثَلَاثَةٌ فِي سَفَرٍ فَلْيُؤَمِّرُوا أَحَدَهُمْ}. رواه أبو داود وصححه الألباني.

“ಮೂರು ಜನರು ಪ್ರಯಾಣ ಹೊರಡುವುದಾದರೆ ಅವರಲ್ಲಿ ಒಬ್ಬರನ್ನು ಅವರು ಅಮೀರ್ ಆಗಿ ನೇಮಿಸಿಕೊಳ್ಳಲಿ.” [ಇದನ್ನು ಅಲ್‌ಅಲ್ಬಾನೀ ಸಹೀಹ್ ಎಂದಿದ್ದಾರೆ].

ಇದು ಅವರ ನಡುವೆ ಭಿನ್ನಾಭಿಪ್ರಾಯಗಳು ಮತ್ತು ತರ್ಕಗಳು ಉಂಟಾಗದಿರುವುದಕ್ಕಾಗಿದೆ.

7. ಮನೆಯಿಂದ ಹೊರಡುವಾಗ, ಮನೆಯಿಂದ ಹೊರಡುವಾಗ ಹೇಳುವ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು. ಅಬೂ ದಾವೂದ್‌ನಲ್ಲಿರುವ ಅನಸ್(ﷺ)ರವರ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹೇಳಿದರು:

{مَنْ قَالَ حِينَ يَخْرُجُ مِنْ بَيْتِهِ بِسْمِ اللَّهِ تَوَكَّلْتُ عَلَى اللَّهِ وَلَا حَوْلَ وَلَا قُوَّةَ إِلَّا بِاللَّهِ، يُقَالُ لَهُ: هُدِيتَ وَكُفِيتَ وَوُقِيتَ. فَيَقُولُ شَيْطَانٌ لِآخَرَ: كَيْفَ لَكَ بِرَجُلٍ قَدْ هُدِيَ وَكُفِيَ وَوُقِيَ؟}. رواه أبو داود.

“ಮನೆಯಿಂದ ಹೊರಡುವಾಗ ಯಾರಾದರೂ ‘ಬಿಸ್ಮಿಲ್ಲಾಹಿ ತವಕ್ಕಲ್ತು ಅಲಲ್ಲಾಹಿ ವಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹ್’ ಎಂದು

ಹೇಳುವುದಾದರೆ ಅವನೊಂದಿಗೆ ಹೇಳಲಾಗುವುದು: ನಿನಗೆ ಮಾರ್ಗದರ್ಶನ ನೀಡಲಾಗಿದೆ, ನಿನಗೆ ಸಾಕು ಮಾಡಲಾಗಿದೆ ಮತ್ತು ನಿನ್ನನ್ನು ಸಂರಕ್ಷಿಸಲಾಗಿದೆ. ಆಗ ಒಬ್ಬ ಶೈತಾನನು ಇನ್ನೊಬ್ಬ ಶೈತಾನನೊಂದಿಗೆ ಕೇಳುವನು: ಮಾರ್ಗದರ್ಶನ ನೀಡಲಾದ, ಸಾಕು ಮಾಡಲಾದ ಮತ್ತು ಸಂರಕ್ಷಣೆ ನೀಡಲಾದ ವ್ಯಕ್ತಿಯೊಂದಿಗೆ ನೀನು ಹೇಗೆ ವರ್ತಿಸುವೆ?"

ಇದರ ನಂತರ ಪ್ರಯಾಣದ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು.

{اللَّهُ أَكْبَرُ (ثَلَاثًا)، سُبْحَانَ الَّذِي سَخَّرَ لَنَا هَذَا وَمَا كُنَّا لَهُ مُقْرِنِينَ، وَإِنَّا إِلَى رَبِّنَا لَمُنْقَلِبُونَ، اللَّهُمَّ إِنَّا نَسْأَلُكَ فِي سَفَرِنَا هَذَا الْبِرَّ وَالتَّقْوَى، وَمِنَ الْعَمَلِ مَا تَرْضَى، اللَّهُمَّ هَوِّنْ عَلَيْنَا سَفَرَنَا هَذَا وَاطْوِ عَنَّا بُعْدَهُ، اللَّهُمَّ أَنْتَ الصَّاحِبُ فِي السَّفَرِ وَالْخَلِيفَةُ فِي الْأَهْلِ، اللَّهُمَّ إِنِّي أَعُوذُ بِكَ مِنْ وَعْثَاءِ السَّفَرِ وَكَآبَةِ الْمَنْظَرِ وَسُوءِ الْمُنْقَلَبِ فِي الْمَالِ وَالْأَهْلِ}. رواه مسلم.

"ಅಲ್ಲಾಹು ಅಕ್ಬರ್ (ಮೂರು ಬಾರಿ). ಸುಬ್‌ಹಾನಲ್ಲದೀ ಸಖ್ಖರ ಲನಾ ಹಾದಾ ವಮಾ ಕುನ್ನಾ ಲಹೂ ಮುಕ್ರಿನೀನ್, ವ ಇನ್ನಾ ಇಲಾ ರಬ್ಬಿನಾ ಲಮುನ್ಕಲಿಬೂನ್. ಅಲ್ಲಾಹುಮ್ಮ ಇನ್ನಾ ನಸ್‌ಅಲುಕ ಫೀ ಸಫರಿನಾ ಹಾದಾ ಅಲ್‌ಬಿರ್ರ ವತ್ತಕ್ವಾ, ವಮಿನಲ್ ಅಮಲಿ ಮಾ ತರ್‌ದಾ. ಅಲ್ಲಾಹುಮ್ಮ ಹವ್ವಿನ್ ಅಲೈನಾ ಸಫರನಾ ಹಾದಾ ವತ್ವಿ ಅನ್ನಾ ಬುಅ್‌ದಹೂ. ಅಲ್ಲಾಹುಮ್ಮ ಅನ್ತ ಸ್ಸಾಹಿಬು ಫಿ ಸ್ಸಫರಿ ವಲ್‌ಖಲೀಫತು ಫಿಲ್ ಅಹ್ಲ್. ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ವಅ್‌ಸಾಇ ಸ್ಸಫರಿ ವಕಆಬತಿಲ್ ಮನ್‌ಝರಿ ವಸೂಇಲ್ ಮುನ್ಕಲಬಿ ಫಿಲ್ ಮಾಲಿ ವಲ್ ಅಹ್ಲ್."

ಪ್ರಯಾಣದಿಂದ ಹಿಂದಿರುಗುವಾಗ ಈ ಮೇಲಿನ ಪ್ರಾರ್ಥನೆಗೆ ಇದನ್ನು ಸೇರಿಸಿ ಪ್ರಾರ್ಥಿಸಬೇಕು:

{آيِبُونَ تَائِبُونَ عَابِدُونَ لِرَبِّنَا حَامِدُونَ}. رواه مسلم.

“ಆಯಿಬೂನ, ತಾಇಬೂನ, ಆಬಿದೂನ ಲಿರಬ್ಬಿನಾ ಹಾಮಿದೂನ್.” [ಮುಸ್ಲಿಮ್]

8. ಪ್ರಯಾಣದ ಸಂದರ್ಭದಲ್ಲಿ ಎತ್ತರವನ್ನು ಏರುವಾಗ ಅಲ್ಲಾಹು ಅಕ್ಬರ್ ಮತ್ತು ಕೆಳಮುಖವಾಗಿ ಇಳಿಯುವಾಗ ಸುಬ್‌ಹಾನಲ್ಲಾಹ್ ಎಂದು ಹೇಳಬೇಕು. ಅಬೂ ದಾವೂದ್ ವರದಿ ಮಾಡಿದ ಹದೀಸಿನಲ್ಲಿ ಹೀಗಿದೆ:

{كَانَ النَّبِيُّ ﷺ وَأَصْحَابُهُ إِذَا عَلَوُا الثَّنَايَا كَبَّرُوا وَإِذَا هَبَطُوا سَبَّحُوا}. رواه أبو داود .

“ಪ್ರವಾದಿ(ﷺ)ರವರು ಮತ್ತು ಅವರ ಸಹಾಬಾಗಳು ಪರ್ವತ ದಾರಿಗಳನ್ನು ಏರುವಾಗ ತಕ್ಬೀರ್ ಹೇಳುತ್ತಿದ್ದರು ಮತ್ತು ಇಳಿಯುವಾಗ ತಸ್ಬೀಹ್ ಹೇಳುತ್ತಿದ್ದರು.”

9. ಗುರುವಾರದಂದು ಪ್ರಯಾಣ ಮಾಡಬೇಕು. ಕಅ್‌ಬ್(﵁)ರವರು ಹೇಳುತ್ತಾರೆ:

{لَقَلَّمَا كَانَ رَسُولُ اللَّهِ  يَخْرُجُ إِذَا خَرَجَ فِي سَفَرٍ إِلَّا يَوْمَ الْخَمِيسِ}. رواه البخاري.

“ಪ್ರವಾದಿ(ﷺ)ರವರು ಗುರುವಾರದ ಹೊರತಾದ ದಿನಗಳಲ್ಲಿ ಅಪರೂಪವಾಗಿ ಮಾತ್ರ ಪ್ರಯಾಣ ಹೊರಡುತ್ತಿದ್ದರು.” [ಅಲ್‌ಬುಖಾರಿ]

10. ಪ್ರಯಾಣದಲ್ಲಿ ರಾತ್ರಿ ವೇಳೆಯನ್ನು ಸದುಪಯೋಗಪಡಿಸಬೇಕು. ಯಾಕೆಂದರೆ ರಾತ್ರಿಯ ವೇಳೆ ಭೂಮಿಯು ಕುಗ್ಗುತ್ತದೆ ಮತ್ತು ಅಂತರವು ಕಡಿಮೆಯಾಗುತ್ತದೆ. ಅನಸ್(ﷺ)ರವರು ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

{عَلَيْكُمْ بِالدُّلْجَةِ، فَإِنَّ الْأَرْضَ تَطْوِي بِاللَّيْلِ}. رواه أبو داود وصححه الألباني.

"ರಾತ್ರಿ ವೇಳೆಯಲ್ಲಿ ಪ್ರಯಾಣ ಮಾಡಿರಿ. ಯಾಕೆಂದರೆ ಖಂಡಿತವಾಗಿಯೂ ರಾತ್ರಿ ವೇಳೆಯಲ್ಲಿ ಭೂಮಿಯು ಕುಗ್ಗುತ್ತದೆ." [ಅಬೂ ದಾವೂದ್, ಅಲ್‌ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ].

11. ಪ್ರಯಾಣದ ವೇಳೆಯಲ್ಲಿ ವಿಶ್ರಾಂತಿ ಪಡೆಯುವುದಾದರೆ ರಸ್ತೆಯನ್ನು ಬಿಟ್ಟು ದೂರ ಸರಿಯಬೇಕು. ಯಾಕೆಂದರೆ ಉಪದ್ರವಕಾರಿ ಜೀವಿಗಳು ರಾತ್ರಿ ವೇಳೆಯಲ್ಲಿ ರಸ್ತೆಯಲ್ಲಿ ತಂಗುತ್ತವೆ. ಪ್ರವಾದಿ(ﷺ)ರವರು ಹೇಳಿದರು:

{إِذَا عَرَّسْتُمْ بِاللَّيْلِ فَاجْتَنِبُوا الطَّرِيقَ فَإِنَّهَا طُرُقُ الدَّوَابِّ وَمَأْوَى الْهَوَامِّ بِاللَّيْلِ}. رواه مسلم.

"ನೀವು ರಾತ್ರಿಯಲ್ಲಿ ತಅ್‌ರೀಸ್ ಮಾಡುವುದಾದರೆ (ಅಂದರೆ ರಾತ್ರಿಯ ಕೊನೆಯ ಹಂತದಲ್ಲಿ ವಿಶ್ರಾಂತಿ ಪಡೆಯುವುದಾದರೆ) ರಸ್ತೆಯಿಂದ ದೂರ ಸರಿಯಿರಿ. ಯಾಕೆಂದರೆ ಅದು ಪ್ರಾಣಿಗಳ ಸಂಚಾರ ಸ್ಥಳವೂ ಉಪದ್ರವಕಾರಿ ಜೀವಿಗಳ ರಾತ್ರಿಯ ಆಶ್ರಯಸ್ಥಾನವೂ ಆಗಿದೆ." [ಮುಸ್ಲಿಮ್]

12. ಪ್ರಯಾಣದ ಮಧ್ಯೆ ಯಾವುದಾದರೂ ಸ್ಥಳದಲ್ಲಿ ತಂಗುವುದಾದರೆ ಈ ಪ್ರಾರ್ಥನೆಯನ್ನು ಪ್ರಾರ್ಥಿಸಬೇಕು:

{أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ}.

“ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿ ಮಿನ್ ಶರ್‍ರಿ ಮಾ ಖಲಕ್.”

ಪ್ರವಾದಿ(ﷺ)ರವರು ಹೇಳಿದರು:

{إِذَا نَزَلَ أَحَدُكُمْ مَنْزِلًا فَقَالَ: أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ، فَإِنَّهُ لَا يَضُرُّهُ شَيْءٌ حَتَّى يَرْتَحِلَ}. رواه مسلم.

“ನಿಮ್ಮಲ್ಲಿ ಯಾರಾದರೂ ಪ್ರಯಾಣದ ಮಧ್ಯೆ ಒಂದು ಸ್ಥಳದಲ್ಲಿ ತಂಗಿ, ಅಊದು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿ ಮಿನ್ ಶರ್‍ರಿ ಮಾ ಖಲಕ್ ಎಂದು ಹೇಳಿದರೆ ಅವನು ಅಲ್ಲಿಂದ ಹೊರಡುವ ತನಕ ಅವನಿಗೆ ಯಾವುದೂ ಹಾನಿ ಮಾಡದು.” [ಮುಸ್ಲಿಮ್]

13. ಪ್ರಯಾಣದಲ್ಲಿ ತನ್ನ ಆವಶ್ಯಕತೆಯು ಪೂರ್ತಿಯಾದರೆ ಹಿಂದಿರುಗಿ ಬರಲು ಆತುರಪಡಬೇಕು. ಅಲ್‌ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವ ಅಬೂ ಹುರೈರಾ(ﷺ)ರವರ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹೇಳಿದರು:

{السَّفَرُ قِطْعَةٌ مِنَ الْعَذَابِ يَمْنَعُ أَحَدَكُمْ نَوْمَهُ وَطَعَامَهُ وَشَرَابَهُ، فَإِذَا قَضَى أَحَدُكُمْ نَهْمَتَهُ فَلْيُعَجِّلِ الرُّجُوعَ إِلَى أَهْلِهِ}. متفق عليه.

“ಪ್ರಯಾಣವೆಂಬುದು ನಿಮ್ಮಲ್ಲೊಬ್ಬನ ನಿದ್ದೆಯನ್ನು, ಆಹಾರವನ್ನು ಮತ್ತು ಪಾನೀಯವನ್ನು ತಡೆಹಿಡಿಯುವ ಒಂದು ಶಿಕ್ಷೆಯಾಗಿದೆ. ಆದ್ದರಿಂದ ನಿಮ್ಮಲ್ಲೊಬ್ಬನು ತನ್ನ ಆವಶ್ಯಕತೆಯನ್ನು ಪೂರ್ತಿ ಮಾಡಿದರೆ ತನ್ನ ಕುಟುಂಬದೆಡೆಗೆ ಮರಳಲು ಆತುರಪಡಲಿ.”

14. ಪ್ರಯಾಣದಿಂದ ಮರಳುವಾಗ ಯಾವುದೇ ಮುನ್ಸೂಚನೆಯಿಲ್ಲದೆ ಮನೆಯನ್ನು ಪ್ರವೇಶಿಸಬಾರದು. ಬದಲಾಗಿ ತಾನು ಬರುವೆನೆಂಬುದನ್ನು ಮೊದಲೇ ತಿಳಿಸಿಕೊಡಬೇಕು. ಅಲ್‌ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವ ಹದೀಸಿನಲ್ಲಿ ಅನಸ್(ﷺ)ರವರು ಹೇಳುತ್ತಾರೆ:

{كَانَ النَّبِيُّ ﷺ لَا يَطْرُقُ أَهْلَهُ لَيْلًا، كَانَ لَا يَدْخُلُ إِلَّا غُدْوَةً أَوْ عَشِيَّةً}.

متفق عليه.

“ಪ್ರವಾದಿ(ﷺ)ರವರು (ಪ್ರಯಾಣದಿಂದ ಹಿಂದಿರುಗುವಾಗ) ರಾತ್ರಿ ವೇಳೆಯಲ್ಲಿ ಮನೆಗೆ ಬರುತ್ತಿರಲಿಲ್ಲ. ಅವರು ಬೆಳಗ್ಗೆ ಅಥವಾ ಸಂಜೆಯೇ ಹೊರತು ಮನೆಯನ್ನು ಪ್ರವೇಶಿಸುತ್ತಿರಲಿಲ್ಲ.”

15. ಪ್ರಯಾಣದಿಂದ ಹಿಂದಿರುಗುವಾಗ ಪತ್ನಿ ಮಕ್ಕಳಿಗೆ ಏನಾದರೂ ಉಡುಗೊರೆಯನ್ನು ತರಬೇಕು. ಯಾಕೆಂದರೆ ಅವರ ಕಣ್ಣುಗಳು ನಿಮ್ಮ ಆಗಮನವನ್ನು ನಿರೀಕ್ಷಿಸುತ್ತಿರುತ್ತವೆ. ನಿಮ್ಮ ಉಡುಗೊರೆಯಿಂದ ಅವರ ಹೃದಯಗಳು ಸಂತೋಷ ಪಡುತ್ತವೆ.

## ಪ್ರಯಾಣದ ನಿಷಿದ್ಧಗಳು

ಮಾನ್ಯ ಸಹೋದರ ಸಹೋದರಿಯರೇ,

ಪ್ರಯಾಣದಲ್ಲಿ ಅನೇಕ ನಿಷಿದ್ಧಗಳು ಸಂಭವಿಸುತ್ತವೆ. ಇವುಗಳ ಬಗ್ಗೆ ನಾವು ಎಚ್ಚರವಹಿಸಬೇಕಾಗಿದೆ.

1. ಅವಿಶ್ವಾಸಿಗಳ ಮತ್ತು ಮುಶ್ರಿಕರ ನಾಡುಗಳಿಗೆ ಪ್ರವಾಸ ಮಾಡಬಾರದು. ಆ ನಾಡುಗಳಲ್ಲಿರುವುದು ಏನೆಂದು ನಿಮಗೆ ಗೊತ್ತೇ? ಅಲ್ಲಿರುವುದು ಕೇವಲ ಅವಿಶ್ವಾಸ, ನಾಸ್ತಿಕತೆ, ಲೈಂಗಿಕತೆ, ಮಾರಣಾಂತಿಕ ರೋಗಗಳು ಮತ್ತು ಅಧಾರ್ಮಿಕತೆ ಮಾತ್ರ. ಅಲ್ಲಿಗೆ ತೆರಳುವುದು ದುಂದುಗಾರಿಕೆ ಮತ್ತು ಹಣದ ದುರ್ವ್ಯಯವಾಗಿದೆ. ಅಲ್ಲಿಗೆ ಪ್ರವಾಸ ಮಾಡದಿರಲು ಬುದ್ಧಿವಂತನಿಗೆ ಇವುಗಳಲ್ಲಿ ಒಂದು ಕಾರಣ ಧಾರಾಳ ಸಾಕು.

ಈ ಕಾರಣದಿಂದಲೇ ಮುಸ್ಲಿಮನಿಗೆ ಯಾವುದೇ ಅಧಿಕಾರವಿಲ್ಲದ ನಾಡಿನಲ್ಲಿ ತಂಗುವುದನ್ನು ಇಸ್ಲಾಮ್ ನಿಷಿದ್ಧಗೊಳಿಸಿದೆ. ಅಲ್ಲಾಹು ಹೇಳುತ್ತಾನೆ:

﴿إِنَّ ٱلَّذِينَ تَوَفَّىٰهُمُ ٱلْمَلَٰٓئِكَةُ ظَالِمِىٓ أَنفُسِهِمْ قَالُوا۟ فِيمَ كُنتُمْ ۖ قَالُوا۟ كُنَّا مُسْتَضْعَفِينَ فِى ٱلْأَرْضِ ۚ قَالُوٓا۟ أَلَمْ تَكُنْ أَرْضُ ٱللَّهِ وَٰسِعَةً فَتُهَاجِرُوا۟ فِيهَا ۚ فَأُو۟لَٰٓئِكَ مَأْوَىٰهُمْ جَهَنَّمُ ۖ وَسَآءَتْ مَصِيرًا ﴿٩٧﴾﴾ [النساء: 97] .

“(ಅವಿಶ್ವಾಸಿಗಳ ನಡುವೆಯೇ ವಾಸಿಸುತ್ತಾ) ಸ್ವತಃ ತಮ್ಮ ಮೇಲೆಯೇ ಅನ್ಯಾಯವೆಸಗಿ ದವರನ್ನು ಮೃತಪಡಿಸುವಾಗ ಮಲಕ್‌ಗಳು ಅವರೊಂದಿಗೆ ‘ನೀವು ಯಾವ ಸ್ಥಿತಿಯಲ್ಲಿದ್ದಿರಿ?’ ಎಂದು ಕೇಳುವರು. ‘ನಾವು ನಾಡಿನಲ್ಲಿ ಮರ್ದಿತರಾಗಿದ್ದೆವು.’ ಎಂದು ಅವರು ಹೇಳುವರು. ಆಗ (ಮಲಕ್‌ಗಳು) ‘ನಿಮಗೆ ನಿಮ್ಮ ಊರನ್ನು ಬಿಟ್ಟು ಎಲ್ಲಾದರೂ ಹೋಗಬಹುದಾದ ರೀತಿಯಲ್ಲಿ ಅಲ್ಲಾಹುವಿನ ಭೂಮಿ ವಿಶಾಲವಾಗಿರಲಿಲ್ಲವೇ?’ ಎಂದು

ಕೇಳುವರು. ಅಂತಹವರ ವಾಸಸ್ಥಳವು ನರಕವಾಗಿದೆ. ಆ ಸ್ಥಳವು ಎಷ್ಟು ನಿಕೃಷ್ಟವಾದುದು!" [ಕುರ್‌ಆನ್ 4:97]

ಅಬೂ ದಾವೂದ್‌ನಲ್ಲಿರುವ ಅಬೂ ಹುರೈರಾ(ﷺ)ರವರ ಹದೀಸಿನಲ್ಲಿರುವ ಪ್ರವಾದಿ(ﷺ)ರವರು ಹೇಳಿದರು:

{أَنَا بَرِيءٌ مِنْ مُسْلِمٍ يُقِيمُ بَيْنَ ظَهْرَانَيِ الْمُشْرِكِينَ}. رواه أبو داود.

"ಮುಶ್ರಿಕ್‌ಗಳ ಮಧ್ಯೆ ವಾಸಿಸುವ ಮುಸ್ಲಿಮನಿಂದ ನಾನು ಸಂಬಂಧ ಕಡಿದುಕೊಂಡಿದ್ದೇನೆ."

ಆದರೆ ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುವ ಉದ್ದೇಶದಿಂದ, ಅಥವಾ ಚಿಕಿತ್ಸೆಗಾಗಿ, ಅಥವಾ ಮುಸ್ಲಿಮರಿಗೆ ಪ್ರಯೋಜನಕಾರಿಯಾದ ಏನನ್ನಾದರೂ ಅಧ್ಯಯನ ಮಾಡುವುದಕ್ಕಾಗಿ, ಅಥವಾ ಧರ್ಮಸಮ್ಮತವಾದ ವ್ಯಾಪಾರಕ್ಕಾಗಿ ಅವಿಶ್ವಾಸಿಗಳ ನಾಡಿಗೆ ಪ್ರಯಾಣ ಮಾಡುವುದನ್ನು ವಿದ್ವಾಂಸರು ಇದರಿಂದ ಹೊರತುಪಡಿಸಿದ್ದಾರೆ. ಆದರೆ ಇವೆಲ್ಲ ಪ್ರಯಾಣಗಳಿಗೆ ಕೆಲವು ಶರತ್ತುಗಳಿವೆ. ಅವು: ಪ್ರಯಾಣ ಮಾಡುವವನು ತನ್ನ ಧರ್ಮವನ್ನು ಪ್ರಕಟಪಡಿಸಬೇಕು, ಅಲ್ಲಾಹು ತನ್ನ ಮೇಲೆ ಕಡ್ಡಾಯಗೊಳಿಸಿರುವುದನ್ನು ಅರಿತಿರಬೇಕು, ಅಲ್ಲಾಹನಲ್ಲಿ ಬಲವಾದ ವಿಶ್ವಾಸವನ್ನು ಹೊಂದಿರಬೇಕು ಮತ್ತು ಧರ್ಮದ ಚಿಹ್ನೆಗಳನ್ನು ಸಂಸ್ಥಾಪಿಸುವ ಸಾಮರ್ಥ್ಯವನ್ನು ಹೊಂದಿರಬೇಕು.

2. ಅಧಾರ್ಮಿಕತೆಯು ತುಂಬಿರುವ ಸ್ಥಳಗಳು, ನಿಷಿದ್ಧ ಕಾರ್ಯಗಳು ಮತ್ತು ಅಶ್ಲೀಲತೆ ಮೊದಲಾದವುಗಳನ್ನು ಹೊಂದಿರುವ ಮನರಂಜನಾ ಸ್ಥಳಗಳಿಗೆ ಪದೇ ಪದೇ ಭೇಟಿ ನೀಡಬಾರದು. ಅಲ್ಲಾಹು ಕೋಪಿಸಿಕೊಳ್ಳುವ ವಿಚಾರಗಳು ತನ್ನಿಂದ ಸಂಭವಿಸುವುದರ ಬಗ್ಗೆ ಮುಸ್ಲಿಮನು ಎಚ್ಚರ

ವಹಿಸಬೇಕಾಗಿದೆ. ಅಲ್ಲಾಹು ತನ್ನನ್ನು ಸದಾ ವೀಕ್ಷಿಸುತ್ತಿದ್ದಾನೆ ಎಂಬ ಅರಿವು ಅವನಿಗಿರಬೇಕು. ಧರ್ಮಕ್ಕೆ ಯಾವುದೇ ಬೆಲೆಯನ್ನೂ ಕಲ್ಪಿಸದ ಟ್ರಾವೆಲ್ ಏಜೆನ್ಸಿಗಳ ಬಗ್ಗೆಯೂ ಎಚ್ಚರವಹಿಸಬೇಕಾಗಿದೆ.

3. ಕಡ್ಡಾಯ ನಮಾಝ್‌ಗಳನ್ನು ತೊರೆಯಬಾರದು ಮತ್ತು ಮಹಿಳೆಯರು ಹಿಜಾಬ್ ಕಳಚಬಾರದು. ಬಹುಶಃ ಧರ್ಮಕ್ಕೆ ಮತ್ತು ಸುಶೀಲತೆಗೆ ಪ್ರಯಾಣದೊಂದಿಗೆ ಯಾವುದೇ ಸಂಬಂಧವೂ ಇಲ್ಲವೆಂಬಂತೆ ಕೆಲವು ಮಹಿಳೆಯರು ವಿಮಾನಕ್ಕೇರಿದ ಕೂಡಲೇ ತಮ್ಮ ಹಿಜಾಬನ್ನು ಕಳಚುತ್ತಾರೆ.

4. ವಸ್ತುಗಳನ್ನು ಖರೀದಿಸುವುದರಲ್ಲಿ ಹಣ ಪೋಲು ಮಾಡಬಾರದು ಮತ್ತು ಒಂದರ ನಂತರ ಒಂದರಂತೆ ಹೊಸ ಹೊಸ ಮೋಡೆಲ್‌ಗಳನ್ನು ಖರೀದಿಸಬಾರದು.

ಮಾನ್ಯ ಸಹೋದರ ಸಹೋದರಿಯರೇ,

ಈ ಮೇಲೆ ವಿವರಿಸಿರುವುದರ ಅರ್ಥ ಒಬ್ಬ ವ್ಯಕ್ತಿ ತನ್ನ ಕುಟುಂಬದವರಿಗೆ ಮನರಂಜನೆಯನ್ನು ಮತ್ತು ಸಂತೋಷವನ್ನು ನೀಡದೆ ಸುಮ್ಮನೆ ಕುಳಿತುಕೊಳ್ಳಬೇಕು ಎಂದಲ್ಲ. ಅತ್ತಿರ್ಮಿದಿಯಲ್ಲಿರುವ ಆಇಶಾ(﵂)ರವರ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹೇಳಿದರು:

{خَيْرُكُمْ خَيْرُكُمْ لِأَهْلِهِ، وَأَنَا خَيْرُكُمْ لِأَهْلِي}. رواه الترمذي.

“ನಿಮ್ಮಲ್ಲಿ ಅತ್ಯುತ್ತಮನು ತನ್ನ ಕುಟುಂಬದೊಂದಿಗೆ ಅತ್ಯುತ್ತಮವಾಗಿ ವರ್ತಿಸುವ ವನಾಗಿದ್ದಾನೆ. ನಾನು ನನ್ನ ಕುಟುಂಬದೊಂದಿಗೆ ನಿಮ್ಮೆಲ್ಲರಿಗಿಂತಲೂ ಉತ್ತಮವಾಗಿ ವರ್ತಿಸುವವನಾಗಿದ್ದೇನೆ.”

ಆದ್ದರಿಂದ ಮುಸ್ಲಿಮನು ತನ್ನ ಪತ್ನಿ ಮಕ್ಕಳನ್ನು ಸಂತೋಷ ಪಡಿಸಲು ಪ್ರಯತ್ನಿಸಬೇಕಾಗಿದೆ. ಅಲ್ಲಾಹನ ಪವಿತ್ರ ಭವನಕ್ಕೆ ಉಮ್ರಾ ಹೋಗುವುದು, ಪ್ರವಾದಿ(ﷺ)ರವರ ಮಸೀದಿಯನ್ನು ಸಂದರ್ಶಿಸುವುದು, ಸುರಕ್ಷಿತ ಇಸ್ಲಾಮೀ ರಾಷ್ಟ್ರಗಳಿಗೆ ಹೋಗುವುದು ಮೊದಲಾದ ಧರ್ಮಸಮ್ಮತವಾದ ಮಾರ್ಗಗಳ ಮೂಲಕ ಅವರಿಗೆ ಮನರಂಜನೆಯನ್ನು ಒದಗಿಸಬೇಕು. ಇದರಿಂದ ಮನರಂಜನೆ ಪಡೆಯುವುದು ಸಂತೋಷಪಡುವುದು ಮೊದಲಾದ ಅವರ ಆಸೆಗಳನ್ನು ಈಡೇರಿಸುವುದರ ಜೊತೆಗೆ ಅವರ ಧರ್ಮವನ್ನು ಮತ್ತು ಸಚ್ಚಾರಿತ್ರ್ಯವನ್ನು ಕಾಪಾಡಿದಂತೆಯೂ ಆಗುತ್ತದೆ. ಇದರಿಂದ ಅಲ್ಲಾಹನಿಗೂ ತೃಪ್ತಿಯಾಗುತ್ತದೆ. ಅವನ ಶರೀಅತ್ತನ್ನು ಮತ್ತು ಆಜ್ಞೆಗಳನ್ನು ಪಾಲಿಸಿದಂತೆಯೂ ಆಗುತ್ತದೆ.

ಮುಸ್ಲಿಮನ ವಿಷಯವೇ ಹಾಗೆ. ಅವನು ತನಗೆ ಎಷ್ಟೇ ಕಷ್ಟವಾದರೂ ಅಲ್ಲಾಹನನ್ನು ತೃಪ್ತಿಪಡಿಸಲು ಪ್ರಯತ್ನಿಸುತ್ತಾನೆ. ಅಲ್ಲಾಹು ಹೇಳುತ್ತಾನೆ:

﴿إِنَّمَا كَانَ قَوْلَ ٱلْمُؤْمِنِينَ إِذَا دُعُوٓا۟ إِلَى ٱللَّهِ وَرَسُولِهِۦ لِيَحْكُمَ بَيْنَهُمْ أَن يَقُولُوا۟ سَمِعْنَا وَأَطَعْنَا ۚ وَأُو۟لَٰٓئِكَ هُمُ ٱلْمُفْلِحُونَ ۝٥١﴾ [النور:51]

.

"ತಮ್ಮ ಮಧ್ಯೆ ತೀರ್ಪು ನೀಡುವ ಸಲುವಾಗಿ ಸತ್ಯವಿಶ್ವಾಸಿಗಳನ್ನು ಅಲ್ಲಾಹುವಿನೆಡೆಗೆ ಮತ್ತು ಸಂದೇಶವಾಹಕರೆಡೆಗೆ ಕರೆಯಲಾದರೆ ಅವರ ಮಾತು 'ನಾವು ಆಲಿಸಿರುವೆವು ಮತ್ತು ಅನುಸರಿಸಿರುವೆವು' ಎಂದು ಮಾತ್ರವಾಗಿರುವುದು. ಯಶಸ್ವಿಯಾದವರು ಅವರೇ ಆಗಿರುವರು." [ಕುರ್‌ಆನ್ 24:51]

﴿وَمَا كَانَ لِمُؤۡمِنٖ وَلَا مُؤۡمِنَةٍ إِذَا قَضَى ٱللَّهُ وَرَسُولُهُۥٓ أَمۡرًا أَن يَكُونَ لَهُمُ ٱلۡخِيَرَةُ مِنۡ أَمۡرِهِمۡۗ وَمَن يَعۡصِ ٱللَّهَ وَرَسُولَهُۥ فَقَدۡ ضَلَّ ضَلَٰلٗا مُّبِينٗا ٣٦﴾ [الأحزاب: 36] .

“ಅಲ್ಲಾಹು ಮತ್ತು ಅವನ ಸಂದೇಶವಾಹಕರು ಒಂದು ವಿಷಯವನ್ನು ತೀರ್ಮಾನಿಸಿದ ಬಳಿಕ ಸತ್ಯವಿಶ್ವಾಸಿಗಾಗಲಿ, ಸತ್ಯವಿಶ್ವಾಸಿನಿಗಾಗಲಿ ತಮ್ಮ ವಿಷಯಕ್ಕೆ ಸಂಬಂಧಿಸಿ ಮುಕ್ತವಾದ ಅಭಿಪ್ರಾಯವಿರುವುದು ಯುಕ್ತವಾದುದಲ್ಲ. ಯಾರು ಅಲ್ಲಾಹು ಮತ್ತು ಅವನ ಸಂದೇಶ ವಾಹಕರನ್ನು ಧಿಕ್ಕರಿಸುವನೋ ಅವನು ಸ್ಪಷ್ಟವಾದ ವಿಧದಲ್ಲಿ ಪಥಭ್ರಷ್ಟನಾಗಿರುವನು.” [ಕುರ್‌ಆನ್ 33:36]

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين.

*********

# ಪರಿವಿಡಿ


| م | العنوان | الصفحة |
|---|---|---|
| 1 | ಬೇಸಿಗೆ ಮತ್ತು ಪ್ರಯಾಣ | **1** |
| 2 | ಆಕ್ಷೇಪಾರ್ಹ ಪ್ರಯಾಣ | **2** |
| 3 | ಪ್ರಶಂಸಾರ್ಹ ಪ್ರಯಾಣ | **3** |
| 4 | ಸಮ್ಮತಾರ್ಹ ಪ್ರಯಾಣ | **3** |
| 5 | ಪ್ರಯಾಣದ ಶಿಷ್ಟಾಚಾರಗಳು | **4** |
| 6 | ಪ್ರಯಾಣದ ನಿಷಿದ್ಧಗಳು | **14** |

IslamHouse.com